# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 669**
**ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ : 21.08.2026**
**ಉತ್ತರಿಸುವ ಸಚಿವರು : ಮಾನ್ಯ ಕಾರ್ಮಿಕ ಸಚಿವರು**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಎರಡು ವರ್ಷಗಳಲ್ಲಿ ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರ ಶೋಷಣೆ ಕುರಿತು ದಾಖಲಾದ ದೂರುಗಳ ಸಂಖ್ಯೆ ಎಷ್ಟು; ಅದರಲ್ಲಿ ಬಾಲ ಕಾರ್ಮಿಕರ ಶೋಷಣೆಯಾದ ಬಗ್ಗೆ ಎಷ್ಟು ದೂರುಗಳು ದಾಖಲಾಗಿವೆ; (ವಿವರ ನೀಡುವುದು)</td><td>
ಕಳೆದ ಎರಡು ವರ್ಷಗಳಲ್ಲಿ ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರ ಶೋಷಣೆ ಕುರಿತು ದಾಖಲಾದ ದೂರುಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಪ್ರಾರಂಭದಲ್ಲಿನ ದೂರುಗಳ ಸಂಖ್ಯೆ</th><th>ವರ್ಷ</th><th>ದಾಖಲಾಧ ದೂರುಗಳ ಸಂಖ್ಯೆ</th><th>ಒಟ್ಟು</th><th>ವಿಲೇವಾರಿಯಾದ ದೂರುಗಳ ಸಂಖ್ಯೆ</th><th>ಬಾಕಿಯಿರುವ ದೂರುಗಳ ಸಂಖ್ಯೆ</th></tr>
<tr><td>1255</td><td>2024</td><td>2722</td><td>3977</td><td>2750</td><td>1277</td></tr>
<tr><td>1277</td><td>2025</td><td>2652</td><td>3929</td><td>2500</td><td>1429</td></tr>
</table>
ರಾಜ್ಯದಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿ ಕಳೆದ ಎರಡು ವರ್ಷ(2024 ರಿಂದ 2026ರ ಜೂನ್ ಅಂತ್ಯಕ್ಕೆ)ಗಳಲ್ಲಿ ನಡೆಸಲಾದ ತಪಾಸಣೆ, ರಕ್ಷಿಸಲಾದ ಬಾಲ ಹಾಗೂ ಕಿಶೋರ ಕಾರ್ಮಿಕರ ಸಂಖ್ಯೆ ಹಾಗೂ ದಾಖಲಾದ ಪ್ರಕರಣಗಳ ವಿವರಗಳು ಈ ಕೆಳಕಂಡಂತಿರುತ್ತವೆ;
<table>
<tr><th>ವರ್ಷ</th><th>ತಪಾಸಣೆಗಳ ಸಂಖ್ಯೆ</th><th>ರಕ್ಷಿಸಲಾದ ಬಾಲ ಕಾರ್ಮಿಕರ ಸಂಖ್ಯೆ</th><th>ಪತ್ತೆಯಾದ ಪ್ರಕರಣಗಳ ಸಂಖ್ಯೆ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th><th>ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ</th><th>ವಸೂಲಾದ ದಂಡ (ರೂ. ಲಕ್ಷಗಳಲ್ಲಿ)</th></tr>
<tr><td>2024</td><td>41652</td><td>781</td><td>556</td><td>287</td><td>19</td><td>18,58,000</td></tr>
<tr><td>2025</td><td>38251</td><td>679</td><td>465</td><td>205</td><td>39</td><td>11,30,250</td></tr>
</table>
</td></tr>
<tr><td>ಆ)</td><td>ಆನ್ ಲೈನ್, ಆಪ್ ಆಧಾರಿತ. ಹಾಗೂ ವೆಬ್ ಸೈಟ್ ಆಧಾರಿತ ತಾಂತ್ರಿಕ ಸೇವೆಗಳನ್ನು ಒದಗಿಸುವ ಇಂಟೀರಿಯರ್ ಡಿಸೈನ್ ಮಾಡುವಂತಹಾ Home Lane Sector2, #1147, ನಂತಹ ಕಂಪನಿಗಳು ನೇರವಾಗಿ ತಾಂತ್ರಿಕ ಸೇವೆಗಳನ್ನು ನೀಡುವ ಕಂಪೆನಿಗಳಾಗಿರುವುದಿಲ್ಲ ಅಂತಹ ಕಂಪೆನಿಗಳು ಕಾರ್ಮಿಕರನ್ನು ಶೋಷಣೆಗೆ</td><td>ಯಾವುದೇ ಆನ್ ಲೈನ್, ಆಪ್ ಆಧಾರಿತ ವೆಬ್ ಸೈಟ್ ಆಧಾರಿತ ಸಂಸ್ಥೆಗಳಲ್ಲಿ ಮಾಲೀಕ-ಕಾರ್ಮಿಕ ಸಂಬಂಧ ಇರುವ ಕಾರ್ಮಿಕರು/ನೌಕರರು ಶೋಷಣೆಗೆ ಒಳಗಾದ ಬಗ್ಗೆ ದೂರು ಸ್ವೀಕೃತವಾದ್ದಲ್ಲಿ ಸಂಬಂಧಿಸಿದ/ಅನ್ವಯಿಸುವ ಕಾರ್ಮಿಕ ಕಾಯ್ದೆಗಳಡಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.</td></tr>
</table>

| | | |
|---|---|---|
| | ಒಳಪಡಿಸಿದರೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು; (ವಿವರ ನೀಡುವುದು) | |
| ಇ) | ಆನ್ ಲೈನ್, ಆಪ್ ಆಧಾರಿತ, ಹಾಗೂ ವೆಬ್ ಸೈಟ್ ಆಧಾರಿತ ಕಂಪೆನಿಗಳು ಆಹಾರ ಡೆಲಿವರಿ, ವಸ್ತುಗಳ ಡೆಲಿವರಿ ಹಾಗೂ ಇತರ ಕೆಲಸಗಳಲ್ಲಿ ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವ ಬಗ್ಗೆ ಪರಿಶೀಲಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಆನ್ ಲೈನ್, ಆಪ್ ಆಧಾರಿತ, ಹಾಗೂ ವೆಬ್ ಸೈಟ್ ಆಧಾರಿತ ಕಂಪನಿಗಳು ಆಹಾರ ಡೆಲಿವರಿ, ವಸ್ತುಗಳ ಡೆಲಿವರಿ ಹಾಗೂ ಇತರ ಕೆಲಸಗಳಲ್ಲಿ (ಗಣಿಗಾರಿಕೆ, ಕಟ್ಟಡ ಕಾಮಗಾರಿ, ಮಾರಟ ಹಾಗೂ ಇನ್ನು ಮುಂತಾದವು) ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುವುದು ಸೇರಿದಂತೆ ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯಡಿ ಕಂಡುಬಂದ ಉಲ್ಲಂಘನೆಗಳ ಬಗ್ಗೆ ಪರಿಶೀಲಿಸಲು ಕರ್ನಾಟಕ ರಾಜ್ಯ ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನಾ ಸೊಸೈಟಿ(ರಿ) ಯಲ್ಲಿ ಕೈಗೊಂಡ ಕ್ರಮಗಳ ವಿವರ ಈ ಕೆಳಕಂಡಂತಿದೆ.<br><br>• ಪ್ರತಿ ಜಿಲ್ಲೆಗಳಲ್ಲಿ ಜಿಲ್ಲಾ ದಂಡಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾರ್ಯಪಡೆ (Task Force)ಯನ್ನು ಹಾಗೂ ತಾಲ್ಲೂಕಿನಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಕಾರ್ಯಪಡೆ (Task Force) ಯನ್ನು ರಚಿಸಲಾಗಿದೆ.<br><br>• ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ, ಕಾರ್ಯಕಾರಿ ಸಮಿತಿಗಳನ್ನು ಹಾಗೂ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಬಾಲ ಕಾರ್ಮಿಕತೆ ನಿರ್ಮೂಲನೆ ಹಾಗೂ ಪುನರ್ವಸತಿ ಸಮಿತಿಗಳನ್ನು ರಚಿಸಲಾಗಿರುತ್ತದೆ.<br><br>• ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರ ಕಲಂ 17ರಡಿ ಸರ್ಕಾರದ 11 ಇಲಾಖೆಗಳ ಅಧಿಕಾರಿಗಳನ್ನು ಹಾಗೂ ಕಲಂ 16 ರಡಿಯಲ್ಲಿ ಪೊಲೀಸ್ ಇಲಾಖೆ ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿ/ನಿರೀಕ್ಷಕರನ್ನು ನಿರೀಕ್ಷಕರುಗಳನ್ನಾಗಿ ನೇಮಿಸಲಾಗಿದೆ. ಅಧಿಸೂಚಿಸಲ್ಪಟ್ಟ ಅಧಿಕಾರಿಗಳ ಹೋಬಳಿವಾರು ತಂಡವನ್ನು ರಚಿಸಿ ಪ್ರತಿಯೊಂದು ತಂಡವೂ ಮಾಸಿಕ ಕನಿಷ್ಠ 15 ತಪಾಸಣೆಗಳನ್ನು ಕೈಗೊಳ್ಳಲು ನಿರ್ದೇಶನ ನೀಡಲಾಗಿದ್ದು, ನಿರೀಕ್ಷಕರುಗಳನ್ನೊಳಗೊಂಡ ತಂಡದ ಮೂಲಕ ವಿಶೇಷ ಅನಿರೀಕ್ಷಿತ ದಾಳಿ/ತಪಾಸಣೆಗಳನ್ನು ಕೈಗೊಳ್ಳಲಾಗುತ್ತಿದೆ.<br><br>• ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯ ನಿರ್ಮೂಲನೆ ಕುರಿತು ವ್ಯಾಪಕವಾದ ಜಾಗೃತಿ ಮೂಡಿಸಲು ಗೋಡೆ ಬರಹಗಳು, ಕರಪತ್ರಗಳು, ಆಟೋ ಪ್ರಚಾರಗಳು, ತರಬೇತಿ ಕಾರ್ಯಾಗಾರಗಳು, ಬಿತ್ತಿ ಪತ್ರಗಳು, ಬೀದಿನಾಟಕಗಳು ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮಗಳ ನಿರಂತರ ಆಯೋಜನೆ ಹಾಗೂ ಸಾಂಪ್ರದಾಯಿಕ ಮಾಧ್ಯಮಗಳು ಹಾಗೂ ಆಧುನಿಕ ವಿದ್ಯುನ್ಮಾನ/ ಮುದ್ರಣ ಮಾಧ್ಯಮಗಳನ್ನು ಬಳಸಿಕೊಂಡು ಈ ಬಗ್ಗೆ "ಅರಿವು-ನೆರವು" ಕಾರ್ಯವನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಸಲಾಗುತ್ತಿದೆ.<br><br>• ಬಾಲ ಹಾಗೂ ಕಿಶೋರ ಕಾರ್ಮಿಕರಿಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಲು ಇರುವ ಉಚಿತ ಮಕ್ಕಳ ಸಹಾಯವಾಣಿ 1098 ಹಾಗೂ ಕಾರ್ಮಿಕ ಸಹಾಯವಾಣಿ 155214ಗಳ ಕುರಿತು ರಾಜ್ಯಾದ್ಯಂತ ಜಾಗೃತಿ ಮೂಡಿಸಲಾಗುತ್ತಿದೆ. |

**(ಸಂತೋಷ್ ಎಸ್ ಲಾಡ್)**
ಮಾನ್ಯ ಕಾರ್ಮಿಕ ಸಚಿವರು
ಕಾರ್ಮಿಕ ಇಲಾಖೆ.